ಕರ್ನಾಟಕ ವಿಧಾನ ಸಭೆ

ಸೋಮವಾರ ೨೩ನೇ ಮಾರ್ಚ್ ೧೯೯೨

ಸದನವು, ವಿಧಾನಸೌಧದ ಮೊದಲನೆಯ ಮಹಡಿಯಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆ ೨೦ ನಿಮಿಷಕ್ಕೆ ಆರಂಭವಾಯಿತು.

(ಸನ್ಮಾನ್ಯ ಅಧ್ಯಕ್ಷರವರಾದ ಶ್ರೀ ಎಸ್. ಎಂ./ಕೃಷ್ಣ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

ಪ್ರಶ್ನೋತ್ತರಗಳು.

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.)

ವೈ. ಕಗ್ಗಲ್ಲ, ಜೋಳದರಾಶಿ (ಬಳ್ಳಾರಿ ತಾಲ್ಲೂಕು) ಏತ ನೀರಾವರಿ ಯೋಜನೆಯ ಸ್ಥಿತಿ

೩೮೩. (೧೪೭೮) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ವೈ. ಕಗ್ಗಲ್ಲ, ಜೋಳದ ರಾಶಿ ಮುಂತಾದ ಹಳ್ಳಿಗಳ ಜಮೀನಿಗೆ ನೀರೊದಗಿಸಲು ಏತ ನೀರಾವರಿ ಯೋಜನೆ ಬಗ್ಗೆ ಮಾನ್ಯ ನೀರಾವರಿ ಮಂತ್ರಿಗಳು ತಿಳಿಸುವಿರೇ?

ಆ) ಈ ಯೋಜನೆಯನ್ನೇನಾದರೂ ೧೯೯೨-೯೩ರ ಅಯವ್ಯಯದಲ್ಲಿ ಸೇರಿಸಲಾಗಿದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ) ಈ ಏತ ನೀರಾವರಿ ಯೋಜನೆ ಅನ್ವೇಷಣಾ ಹಂತದಲ್ಲಿದೆ.

ಆ) ಇಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ:- ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ವೈ. ಕಗ್ಗಲ್ ಮತ್ತು ಜೋಳದ ರಾಶಿ ಏತ ನೀರಾವರಿ ಯೋಜನೆಯಿಂದ ಆರೇಳು ಸಾವಿರ ಎಕರೆ ನೀರಾವರಿಯಾಗುತ್ತದೆ. ಆ ಭಾಗದಲ್ಲಿ ಬಡವರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರು ಇದ್ದಾರೆ. ಈ ಏತ ನೀರಾವರಿ ಯೋಜನೆಯನ್ನು ಮಾಡಿಕೊಡಬೇಕೆಂದು ಕೇಳಿ ಎರಡು ವರ್ಷಗಳು ಆಯಿತು. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಮಾನ್ಯ ಸಭಾಧ್ಯಕ್ಷರೇ, ಆದರ ಬಗ್ಗೆ ಇನ್ನೂ ಸಮೀಕ್ಷೆ ನಡೆಯುತ್ತಿದೆ. ೬೫೦೦ ಎಕರೆ ನೀರಾವರಿಯಾಗುತ್ತದೆ. ಬರುವ ವರ್ಷದಲ್ಲಿ ಅದರ ಬಗ್ಗೆ ಸಾಧ್ಯವಾದಷ್ಟು ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಅದು ಏನೋ ಅನ್ವೇಷಣೆ ನಡೆಯುತ್ತಿದೆಯೆಂದು ಬರೆದಿದ್ದೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಹೌದು.